# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.

| | |
|---|---|
| ಸಿ.ಸಿ. ನಂಬರ್ | : 64/2021 |
| ಸಿ.ಡಬ್ಲೂ | : 01 |
| ಪಿ.ಡಬ್ಲೂ | : 01 |
| ಸಾಕ್ಷಿಯ ಹೆಸರು | : ನಿಂಗಬಸವ್ವ ಬಸವರಾಜ ರಾಯಣ್ಣವರ |
| ವಯಸ್ಸು | : 28 ವರ್ಷ |
| ಉದ್ಯೋಗ | : ಮನೆಗೆಲಸ |
| ವಾಸ ಸ್ಥಳ | : ಗುಡಿಸಾಗರ |

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 06.11.2025.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿತರ ಪರಿಚಯ ಇದೆ. ಚಾಸಾ-4 ರಿಂದ 6 ರವರ ಪರಿಚಯವಿದೆ.

2017 ರಲ್ಲಿ ಒಂದು ದಿನ ಸಂಜೆ ನಾನು ನಮ್ಮ ಮನೆಯಲ್ಲಿ ಕುಳಿತುಕೊಂಡಿದ್ದಾಗ 1ನೇ ಆರೋಪಿ ಬೈಯುತ್ತಾ ಹೊರಟಿದ್ದು, ಅದನ್ನು ಪ್ರಶ್ನಿಸಿದ ನನಗೆ ಸಂಜೆ ಆರೋಪಿತರೆಲ್ಲರೂ ಪುನಃ ನಮ್ಮ ಮನೆಗೆ ಬಂದು ನಮಗೆ ಬೈದು, 1 ಮತ್ತು 2 ನೇ ಆರೋಪಿತರು ಬಡಿಗೆಯಿಂದ ನನಗೆ ಹೊಡೆಬಡೆ ಮಾಡಿದ್ದು, ನಾನು ಆ ಸಮಯಕ್ಕೆ ಗರ್ಭಿಣಿ ಇದ್ದೇನು. ನಂತರ ನಾನು ನವಲಗುಂದ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದು, ಅಲ್ಲಿಂದ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ನಂತರ ನಾನು ಆರೋಪಿತರ ವಿರುದ್ಧ ಪೋಲಿಸ ಠಾಣೆಗೆ ದೂರನ್ನು ಸಲ್ಲಿಸಿರುತ್ತೆನೆ. ಸಾಕ್ಷಿ ನೋಡಿ ಗುರುತಿಸಿದ ದೂರನ್ನು **ನಿಪಿ-1** ಎಂದು ಹಾಗೂ ಸಾಕ್ಷಿಯ ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ. ರವರಿಂದಃ**

ಸದರಿ ಘಟನೆಯು ದಿಃ 25-07-2017 ರಂದು ಸಂ.04.30 ಗಂಟೆಗೆ ಆಗಿರುತ್ತದೆ ಎಂದರೆ ಸರಿ. 1 ನೇ ಆರೋಪಿ ನನ್ನ ದುಬ್ಬಕ್ಕೆ ಕೈಯಿಂದ ಹೊಡೆದಿರುತ್ತಾರೆ ಎಂದರೆ ಸರಿ. 2 ನೇ ಆರೋಪಿ ನನ್ನ ಹೊಟ್ಟೆಗೆ ಒದ್ದು, ಕೆಳಗೆ ಬಿಳಿಸಿ ಸೀರೆ ಹಿಡಿದು ಎಳೆದಾಡಿ ಮಾನಭಂಗ ಮಾಡಲು ಪ್ರಯತ್ನಿಸಿರುತ್ತಾನೆ ಎಂದರೆ ಸರಿ. ನಂತರ ಚಾಸಾ-6 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ದಿನಾಂಕಃ 28-07-2017 ರಂದು ಬೆ.10.00 ರಿಂದ 11.00 ಗಂಟೆಯವರೆಗೆ ನಾನು ತೋರಿಸಿದ ಮೇರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಗುನ್ನಾ ಸ್ಥಳದ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀಮತಿ ಎಸ್ ಎಸ್ ಎಸ್ ವಕೀಲರಿಂದಃ**

1 ನೇ ಆರೋಪಿ ನನ್ನ ತಾಯಿಯ ಅಣ್ಣನ ಹೆಂಡತಿ. ನನ್ನ ತಾಯಿಯನ್ನು ಮೆಣಸಗಿ ಗ್ರಾಮದ ವ್ಯಕ್ತಿಗೆ ವಿವಾಹ ಮಾಡಿ ಕೊಡಲಾಗಿದೆ. ನಾನು ಹಾಗೂ ನನ್ನ ತಾಯಿ 10-12 ವರ್ಷಗಳಿಂದ ಗುಡಿಸಾಗರ ಗ್ರಾಮದಲ್ಲಿ ವಾಸವಿರುತ್ತೇವೆ. ನಾವು ವಾಸವಿರುವ ಮನೆ 1 ನೇ ಆರೋಪಿಯ ಗಂಡನ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮನೆ 2 ನೇ ಆರೋಪಿಯ ಅಜ್ಜನ ಆಸ್ತಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಜಮೀನು ಸರ್ವೇ ನಂಃ 292/2 ಇದು 2 ನೇ ಆರೋಪಿಯ ಪಿತ್ರಾರ್ಜಿತ ಆಸ್ತಿಯಾಗಿದ್ದು, ಅದನ್ನು ನನ್ನ ತಾಯಿ ಇಲ್ಲಿಯವರೆಗೆ ಆತನಿಗೆ ಬಿಟ್ಟುಕೊಟ್ಟಿರುವುದಿಲ್ಲ ಎಂದರೆ ಸದರಿ ಆಸ್ತಿ ನನಗೆ ಸಂಬಂಧಿಸಿಲ್ಲ ಎಂದು ನುಡಿದಿರುತ್ತಾರೆ. ಆರೋಪಿತರು ಸದರಿ ಆಸ್ತಿಗಳನ್ನು ಬಿಟ್ಟುಕೊಡುವಂತೆ ನನ್ನ ತಾಯಿಗೆ ಸಾಕಷ್ಟು ಬಾರಿ ಕೇಳಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಆತನ ತಂದೆಯ ಆಸ್ತಿಯಲ್ಲಿ ವಹಿವಾಟು ಮಾಡುತ್ತಿಲ್ಲ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಘಟನೆಯಾದಾಗ ಊರಿನ ಸಾಕಷ್ಟು ಜನ ನೆರದಿದ್ದರು. ಸದರಿ ಜನ ಪ್ರಸ್ತುತ ಪ್ರಕರಣದಲ್ಲಿ ಸಾಕ್ಷಿದಾರರಿಲ್ಲ ಎಂದರೆ ಸಾಕ್ಷಿಯು ಆರೋಪಿತರಿಗೆ ಹೆದರಿ ಸದರಿ ಜನ ಸಾಕ್ಷಿ

ನುಡಿಯುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಅಂಶವನ್ನು ನನ್ನ ದೂರಿನಲ್ಲಿ ಕಾಣಿಸಿರುವುದಿಲ್ಲ. ನಾನು ಕಿಮ್ಸ ಆಸ್ಪತ್ರೆಯಲ್ಲಿ ದೂರನ್ನು ಸಲ್ಲಿಸಿರುತ್ತೇನೆ. ನಾನು ದೂರಿನಲ್ಲಿರುವ ಅಂಶಗಳನ್ನು ಕೇಳಿಕೊಂಡು ನಂತರ ಸಹಿ ಮಾಡಿರುತ್ತೇನೆ. ನಿಪಿ-1 ನ್ನು ಪೋಲೀಸರು ಬರೆದಿದ್ದು, ಅವರ ಹೆಸರು ಹೇಳಲಾಗುವುದಿಲ್ಲ. ಘಟನೆಯಾದ ದಿನ ರಾತ್ರಿ ನಾನು ಕಿಮ್ಸ ಆಸ್ಪತ್ರೆಗೆ ದಾಖಲಾಗಿದ್ದು, ಮರುದಿನ ಪೋಲೀಸರು ಮ.12.00 ಗಂಟೆಯ ಆಸ್ಪತ್ರೆಗೆ ಬಂದಿರುತ್ತಾರೆ. ಆಸ್ತಿ ನಮ್ಮಿಂದ ಹೋಗುತ್ತದೆ ಎಂದು ನನ್ನ ತಾಯಿಯ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಹೊಡೆಬಡೆ ಮಾಡಿಲ್ಲ, ಅವಾಚ್ಯವಾಗಿ ಬೈದಿಲ್ಲ, ಮಾನಭಂಗ ಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**